# ಈಕಿ ಹುಬ್ಬಳ್ಳಿಯಾಕಿ!

**ಕೀರ್ತಿ ಕಲಕೇರಿ ಹುಬ್ಬಳ್ಳಿಯ ಹುಡುಗಿ. 'ಪ್ರಾರಂಭ' ಸಿನಿಮಾದ ಮೂಲಕ ನಟನಾಪಯಣ ಪ್ರಾರಂಭಿಸಿರುವ ಅವರೀಗ 'ಓ ಮೈ ಲವ್' ಎಂಬ ಉದ್ಗಾರ ತೆಗೆಯುತ್ತಿದ್ದಾರೆ.**

**■ ಪದ್ಮನಾಭ ಭಟ್**



'ಚಿತ್ರರಂಗಕ್ಕೆ ಬರಬೇಕು ಎಂಬ ಆಸೆ ತುಂಬ ಜನರಿಗೆ ಇರುತ್ತದೆ. ಆದರೆ ಆ ಕನಸು ನನಸಾಗುವುದು ಕೆಲವರಿಗೆ ಮಾತ್ರ. ಅದರಲ್ಲಿಯೂ ಉತ್ತರ ಕರ್ನಾಟಕದವರಿಗೆ ಚಿತ್ರರಂಗದಲ್ಲಿ ಅವಕಾಶ ಸಿಗುವುದು ಇನ್ನೂ ಕಡಿಮೆ. ಸಿಕ್ಕರೂ ಚಿತ್ರರಂಗದಲ್ಲಿ ಸರಿಯಾಗಿ ಗುರ್ತಿಸಿಕೊಳ್ಳಲಾಗದೇ ಹೋಗಬಹುದು. ಸರಿಯಾದ ಸಿನಿಮಾದಲ್ಲಿ, ಸರಿಯಾದ ತಂಡದ ಜೊತೆ ಕೆಲಸ ಮಾಡುವ ಅವಕಾಶ ಸಿಗುವುದು ಇನ್ನೂ ಅಪರೂಪ. ನಾನು ಈ ವಿಷಯದಲ್ಲಿ ತುಂಬ ಅದೃಷ್ಟವಂತೆ' – ಹೀಗೆ ಹೇಳಿ ಹೆಮ್ಮೆಯಿಂದ ನಕ್ಕರು ಕೀರ್ತಿ ಕಲಕೇರಿ.

ಕೀರ್ತಿ ಹುಬ್ಬಳ್ಳಿಯ ಹುಡುಗಿ. ನಟನೆಯ ನಡುವಿನ ಬಿಡುವಿನಲ್ಲಿ ಬಿ.ಕಾಂ. ಓದುತ್ತಿರುವ ಅವರು ಚಿತ್ರರಂಗಕ್ಕೆ ಪ್ರವೇಶಿಸಿದ್ದು ಮನೋರಂಜನ್ ರವಿಚಂದ್ರನ್ ಅಭಿನಯದ 'ಪ್ರಾರಂಭ' ಸಿನಿಮಾದ ಮೂಲಕ. ಅವರ ಮೊದಲ ಸಿನಿಮಾ ಇನ್ನೂ ಬಿಡುಗಡೆಯಾಗಿಲ್ಲ. ಹಾಗೆಂದು ಅವಕಾಶಗಳು ಆ ಸಿನಿಮಾದ ಬಿಡುಗಡೆಗೆ ಕಾಯುತ್ತ ಕೂತಿಲ್ಲ. ಎರಡನೇ ಸಿನಿಮಾ ಈಗಾಗಲೇ ಸೆಟ್ಟೇರಿ, ಚಿತ್ರೀಕರಣವೂ ಪ್ರಾರಂಭಗೊಂಡಿದೆ. ಶಶಿಕುಮಾರ್ ಮಗ ಅಕ್ಷಿತ್ ಶಶಿಕುಮಾರ್ ನಾಯಕನಾಗಿ ನಟಿಸುತ್ತಿರುವ 'ಓ ಮೈ ಲವ್' ಸಿನಿಮಾಗೆ ಕೀರ್ತಿ ನಾಯಕಿ.

'ಮೊದಲ ಸಿನಿಮಾದಲ್ಲಿ ರವಿಚಂದ್ರನ್ ಮಗನ ಜೊತೆಗೆ ನಟಿಸುವ ಅವಕಾಶ ಸಿಕ್ಕಿತ್ತು. ಅದು ಆಡಿಷನ್‌ನಲ್ಲಿ ಭಾಗವಹಿಸಿ ಗಿಟ್ಟಿಸಿಕೊಂಡ ಅವಕಾಶ. ಆ ಸಿನಿಮಾದಿಂದ ನಾನು ಸಾಕಷ್ಟು ಕಲಿತೆ. ಆ ಚಿತ್ರಕ್ಕೆ ಆಯ್ಕೆಯಾದ ಮೇಲೆ ನಟನೆಯ ತರಬೇತಿ ಪಡೆದುಕೊಂಡೆ. ಎರಡು ತಿಂಗಳ ವರ್ಕ್‌ಷಾಪ್ ಮಾಡಿದ ಮೇಲೆಯೇ ಸೆಟ್‌ಗೆ ಹೋಗಿದ್ದು. ಅದರಲ್ಲಿ ನನ್ನ ಪಾತ್ರದ ಹೆಸರು ಪ್ರಾರ್ಥನಾ. ಕಾಲೇಜು ಮುಗಿಸಿ ಆಫೀಸಲ್ಲಿ ಕೆಲಸ ಮಾಡುತ್ತಿರುವ ಹುಡುಗಿಯ ಪಾತ್ರ. ಮೊದಲ ಚಿತ್ರದಲ್ಲಿಯೇ ಸಾಕಷ್ಟು ಮಹತ್ವದ ಪಾತ್ರ ಸಿಕ್ಕಿದೆ. ಚಿತ್ರದುದ್ದಕ್ಕೂ ನಾನು ಇರುತ್ತೇನೆ. ಇದಕ್ಕಿಂತ ಒಳ್ಳೆಯ ಲಾಂಚ್ ಸಿಗಲು ಸಾಧ್ಯವೇ?' ಎಂದು ಕೇಳುವ ಕೀರ್ತಿ ಈಗ ಎರಡನೇ ಚಿತ್ರದ ಪಾತ್ರದ ಸಿದ್ಧತೆಯಲ್ಲಿ ತೊಡಗಿದ್ದಾರೆ. ಇದಕ್ಕೂ ಸಾಕಷ್ಟು ಪೂರ್ವತಯಾರಿ ಮಾಡಿಕೊಂಡಿದ್ದಾರಂತೆ. ಅದಕ್ಕಾಗಿಯೇ ಕುದುರೆ ಸವಾರಿಯನ್ನೂ ಕಲಿಯುತ್ತಿದ್ದಾರೆ.

'ಖಾಲಿ ತಲೆಯಲ್ಲಿ ಸೆಟ್‌ಗೆ ಹೋದರೆ ಆ ಕ್ಷಣದಲ್ಲಿ ನಿರ್ದೇಶಕರು ಏನು ಹೇಳುತ್ತಾರೋ ಅಷ್ಟನ್ನೇ ಮಾಡಬಹುದು. ಆದರೆ ನಾವು ಸಾಕಷ್ಟು ಸಿದ್ಧರಾಗಿ, ಪಾತ್ರದ ಬಗ್ಗೆ ತಿಳಿದುಕೊಂಡು ಹೋದರೆ ಸೆಟ್‌ನಲ್ಲಿ ಪಾತ್ರಕ್ಕೆ ಹೆಚ್ಚಿನ ಭಾವ ತುಂಬಲು ಸಾಧ್ಯ. ಹಾಗಾಗಿ ಸಿದ್ಧತೆಯೇ ಒಳ್ಳೆಯ ನಟನೆಯ ಮೊದಲ ಮೆಟ್ಟಿಲು' ಎನ್ನುತ್ತಾರೆ ಕೀರ್ತಿ.

ಈಗಾಗಲೇ ಕನ್ನಡದಲ್ಲಿ ಮತ್ತೊಂದು ಸಿನಿಮಾಗೆ ಸಹಿ ಹಾಕಿರುವ ಅವರಿಗೆ ತೆಲುಗು ಚಿತ್ರರಂಗದಿಂದಲೂ ಒಂದು ಅವಕಾಶ ಬಂದಿದೆಯಂತೆ. ಪೌರಾಣಿಕ ಪಾತ್ರದಲ್ಲಿ ನಟಿಸುವ ಬಯಕೆ ಇರುವ ಕೀರ್ತಿ, ಭರತನಾಟ್ಯವನ್ನೂ ಕಲಿಯುತ್ತಿದ್ದಾರೆ.

'ಸ್ಕ್ರಿಪ್ಟ್ ಮತ್ತೆ ಪಾತ್ರವನ್ನು ನೋಡಿ ನಾನು ಸಿನಿಮಾವನ್ನು ಒಪ್ಪಿಕೊಳ್ಳುತ್ತೇನೆ' ಎನ್ನುವ ಕೀರ್ತಿ, ತಮ್ಮ ಮೊದಲ ಸಿನಿಮಾ 'ಪ್ರಾರಂಭ'ಕ್ಕೆ ಜನರು ಹೇಗೆ ಸ್ಪಂದಿಸುತ್ತಾರೆ ಎಂಬ ಕುತೂಹಲವನ್ನು ಎದೆಯಲ್ಲಿಟ್ಟುಕೊಂಡು ಕಾಯುತ್ತಿದ್ದಾರೆ. ■